ಕೈಗೊಳ್ಳುತ್ತೇವೆ. ಅದೇನು ಸಾಧ್ಯ ಇದೆ, ಅದು ಎಲ್ಲಾ ಸಂಬಂಧಪಟ್ಟವರಿಗೆ ಅದನ್ನು ಕೊಡಿಸುವ ವ್ಯವಸ್ಥೆಯನ್ನು ಕೂಡ ನಾವು ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಅವರಿಗೆ ಹೇಳುತ್ತೇನೆ.

ಓ) ಆಥರೈಸ್ಡ್ ಕಮಿಟಿ ಫಾರ್ ಕಡ್ನಿಟ್ರಾನ್ಸ್ ಪ್ಲಾಂಟೇಷನ್‌ಗೆ ಡಾ॥ ಸಿದ್ಧರಾಜುರವರನ್ನು ನೇಮಕ ಮಾಡಿರುವ ಬಗ್ಗೆ.

+ ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಸಭಾಧ್ಯಕ್ಷರೇ, ನಾವು ಈ ಸದನದಲ್ಲಿ ಅನೇಕ ವಿಷಯಗಳನ್ನು ಸಾರ್ವಜನಿಕ ಹಿತಾಸಕ್ತಿ ವಿಚಾರಗಳನ್ನು ಇಲ್ಲಿ ನಾವು ಪ್ರಸ್ತಾಪಿಸುತ್ತೇವೆ. ಪ್ರಸ್ತಾಪಿಸಿದಾಗ ಸರ್ಕಾರದವರು ಬಹಳ ವೀರಾವೇಷದಿಂದ ಕಳಕಳಿಯಲ್ಲಿ ನಿಮಗಿಂತ ನಾವೇನು ಕಡಿಮೆ ಇಲ್ಲ, ತಪ್ಪಿತಸ್ಥರನ್ನು ನಾವು ಗುರಿ ಮಾಡಿಯೇ ಮಾಡುತ್ತೇವೆ ಎಂದು ನೀವು ಅನೇಕ ಸಲ ಹೇಳಿರುವ ಸ್ಟಾಂಡರ್ಡ್ ರಾಗವನ್ನು ಇಲ್ಲಿ ಕೇಳುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಆಗುತ್ತಿರುವುದು ಏನು ಎಂದು ಒಂದು ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ. ರಾಜ್ಯ ಸರ್ಕಾರದಿಂದ ಒಂದು ಸಮಿತಿ ರಚನೆಯಾಗಿದೆ. ಎಂದು. ಆಥರೈಸ್ಡ್ ಕಮಿಟಿ ಫಾರ್ ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್ ಈ ನೋಟಿಫಿಕೇಷನ್ ಪ್ರಕಾರ ಈ ನೇಮಕಾತಿಯಿಂದ ಈ ಸಮಿತಿಯಲ್ಲಿ ಯಾರು ಇರಬೇಕು, ಅಧ್ಯಕ್ಷರಾಗಿ ಕಾನೂನು ಕಾರ್ಯದರ್ಶಿ, ಸದಸ್ಯರು ಒಬ್ಬರು ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್, ಇನ್ನೊಬ್ಬರು either a Specialist Professor of Nephralogy or Urology. ಮೊದಲನೆಯವರು ಕಾನೂನು ಕಾರ್ಯದರ್ಶಿ, ಓ.ಕೆ. ಎರಡನೆಯವರು ಹೆಲ್ತ್ ಸರ್ವೀಸಸ್ ಡೈರೆಕ್ಟರ್, ಓ.ಕೆ. ಮೂರನೆಯವರು ಬಹಳ ಸ್ವಾರಸ್ಯಕರವಾದ ಅಂಶ. ಆ ಮೂರನೆಯವರ ನೇಮಕಾತಿಯನ್ನು ನಾವು ಕೇಳಿಬಿಟ್ಟರೆ, it is interesting, it is confusing, it is shocking. ಯಾರು ಮೂರನೆಯವರು ಎಂದು. ಒಬ್ಬ ಡಾಕ್ಟರ್ ಕೆ.ಎಸ್.ಸಿದ್ಧರಾಜು, ಮಹಾನುಭಾವ. ನಮ್ಮ ರಾಜ್ಯದ ಐತಿಹಾಸಿಕ ಮನುಷ್ಯ. ಅವರನ್ನು ಇವರು ಮೂರನೇ ಸದಸ್ಯರನ್ನಾಗಿ ಮಾಡಿದ್ದಾರೆ. ಈಗ ಮೂರ್ನಾಲ್ಕು ವರ್ಷಗಳ ಹಿಂದೆ ಇದೇ ಸದನದಲ್ಲಿ ಬಹಳ ಬಿಸಿ ಬಿಸಿಯಾಗಿ ಚರ್ಚೆಯಾಯಿತು. ಅನೇಕರು ಕಣ್ಣೀರು ಬರುವ ಒಂದು ಭಾವನೆಯಿಂದ ಮಾತನಾಡಿದರು. ಇಡೀ ದೇಶದಲ್ಲಿ ಕರ್ನಾಟಕದ ಜನತೆ ತಲೆತಗ್ಗಿಸುವಂಥ ಘಟನೆ ಮೂತ್ರಪಿಂಡದ ಕಳ್ಳತನವಾಗಿರುವ ವಿಚಾರವನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ವಿಧಾನಸಸೆಯ ಒಳಗಡೆ, ಹೊರಗಡೆ ಅನೇಕ ಹೋರಾಟಗಳು ನಡೆಯಿತು. ಆಗ ಗೊತ್ತಾಯಿತು, ಇದೊಂದು ಷಡ್ಯಂತರ ಇದೆ, ಒಂದು ಜಾಲ ಇದೆ ಎಂದು. ಮೂತ್ರಪಿಂಡವನ್ನು ಅಮಾಯಕರಿಂದ ಕದ್ದು ಶ್ರೀಮಂತರಿಗೆ ಮಾರುವ ಒಂದು ಷಡ್ಯಂತರ ಇದೆ ಎಂದು ಹೇಳಿದರು. ಆಗ 1995ನೇ ಇಸವಿ ಜೂನ್ ತಿಂಗಳಲ್ಲಿ ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಸ್ಟೇಷನ್‌ನವರು 1800 ಪುಟಗಳ ಒಂದು ಛಾರ್ಜ್‌ಶೀಟನ್ನು ಬೆಂಗಳೂರು ನಗರದ

11ನೇ ಸಿಎಂಎಂ ಕೋರ್ಟಿನಲ್ಲಿ ಫೈಲ್ ಮಾಡಿದ್ದಾರೆ. ಆ ಛಾರ್ಜ್ ಶೀಟಿನಲ್ಲಿ ಆರೋಪಿಗಳು ಯಾರು? ಅಕ್ಯೂಸ್ಡ್ ಯಾರು? ಅಕ್ಯೂಸ್ಡ್ ನಂಬರ್ 1 ಎಂದರೆ ಡಾಕ್ಟರ್ ಕೆ.ಎಸ್.ಸಿದ್ಧರಾಜು. ಅಕ್ಯೂಸ್ಡ್ ನಂಬರ್ 2, ಡಾ॥ ದಿಲೀಪ್ ಪಟೇಲ್, ಅಕ್ಯೂಸ್ಡ್ ನಂಬರ್ 3, ಡಾಕ್ಟರ್ ದಿಲೀಪ್ ಧನಪಾಲ್, ಅಕ್ಯೂಸ್ಡ್ ನಂಬರ್ 4, ಡಾ॥ ಸೈಯದ್ ಅಜೀಜ್ ಅಹಮದ್. ಹೀಗೆ ಅಕ್ಯೂಸ್ಡ್ ನಂಬರ್ (1) ಮತ್ತು ಇತರರು ಯಾರೂ ಕೂಡ ಆರೋಪದಿಂದ ಮುಕ್ತರಾಗಿಲ್ಲ. ಕೇಸು ನಡೆಯುತ್ತಿದೆ. ಅಂಥವರ ಮೇಲೆ ಛಾರ್ಜಸ್ ಇದ್ದರೂ they have been charged with murder criminal intimidation, criminal conspiracy, robbery, wrongful confinement. ಇಷ್ಟೆಲ್ಲಾ ಆದ ವ್ಯಕ್ತಿಯನ್ನು ನೀವು ಈ Authorised Committee for Kidney Transplantationಗೆ ಮೆಂಬರನ್ನು ಮಾಡುತ್ತೀರಲ್ಲಾ ನಿಮಗೇನಾದರೂ ಕೂಡ ನ್ಯಾಯದ ಬಗ್ಗೆ ನಿಷ್ಠೂರತೆ ಇದೆಯೇ? ಆ ಕಿಡ್ನಿ ಕದಿಯುತ್ತಿದ್ದವರ ಮೇಲೆ ನಿಜವಾಗಿಯೂ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಮನಸ್ಸು ಇದೆಯಾ ಅಥವಾ ನೀವು ಹೇಳಬಹುದು ನೆಫ್ರಾಲಜಿಸ್ಟ್ ಮಾತ್ರ ಮಾಡಬೇಕು ಎಂದು. ಖಾಸಗಿಯವರು ಯಾರು ನೆಫ್ರಾಲಜಿಸ್ಟ್ ಇಲ್ಲವೋ ಅಥವಾ Either Nephrologist or Urologist ಎಂದು ಇದೆ. ಯೂರಾಲಜಿಸ್ಟನ್ನು ಮಾಡದೆ ಖಾಸಗಿಯವರನ್ನು ಮಾಡದೆ ಇವತ್ತು ಇಡೀ ದೇಶದಲ್ಲಿ ಛಾರ್ಜ್‌ಶೀಟ್ ಆದವರನ್ನು ರಾಜೀನಾಮೆ ಕೊಡಿ ಎಂದು ರಾಜಕೀಯದಲ್ಲಿ ಕೇಳುತ್ತಿರುವುದಲ್ಲ. ಛಾರ್ಜ್‌ಶೀಟ್ ಆಗಿ ಸಸ್ಪೆಂಡ್ ಆದ ವ್ಯಕ್ತಿಯನ್ನು ಮತ್ತೆ ಇದರಲ್ಲಿ ಮೆಂಬರ್ ಮಾಡಿ ಕಳ್ಳತನ ಮಾಡುತ್ತಿದ್ದ ಆರೋಪವನ್ನು ಹೊತ್ತಿರುವ ವ್ಯಕ್ತಿಯನ್ನು ಮೆಂಬರ್ ಮಾಡಿದ್ದೀರಲ್ಲಾ ಜನರಿಗೆ ಇದರಿಂದ ವಿಶ್ವಾಸ ಬರುತ್ತದಾ? ಮತ್ತೆ ಜನರು ಆಸ್ಪತ್ರೆಗೆ ಹೋಗುವುದಕ್ಕೆ ತಯಾರಾಗುತ್ತಾರೆಯೇ? ದಯವಿಟ್ಟು ಇದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕು.

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಮೂತ್ರಪಿಂಡಗಳನ್ನು, ಅಂಗಾಂಗಗಳನ್ನು ಕಸಿ ಮಾಡುವ ಕಾಯ್ದೆಯನ್ನು ಕೇಂದ್ರ ಸರ್ಕಾರದವರು 1994ನೇ ಇಸವಿಯಲ್ಲಿ ಜಾರಿಗೆ ತಂದರು. ಅದರ ಹಿನ್ನೆಲೆಯನ್ನು ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ವಿವರಿಸಿ ಹೇಳಿದ್ದಾರೆ. ಬಾಂಬೆಯಲ್ಲಿ ನಡೆಯುತ್ತಿದ್ದ ಮೂತ್ರಪಿಂಡಗಳ ಕಳ್ಳತನದ ಹಿನ್ನೆಲೆಯಲ್ಲಿ ಸದರಿ ಕಾಯ್ದೆಯನ್ನು ಜಾರಿಗೆ ತಂದ ನಂತರ ಈ ಕುರಿತ ಎಲ್ಲಾ ಚಟುವಟಿಕೆಗಳನ್ನು ಕೂಡ ನಮ್ಮ ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟಿತು. ಇದಾದ ನಂತರ, ನಾನ್-ರಿಲೇಟಿವ್ ಕಿಡ್ನಿಯನ್ನು ಕೊಡುವುದು ಮತ್ತು ಅಂಗಾಂಗಗಳನ್ನು ಕಸಿ ಮಾಡತಕ್ಕಂಥಾದ್ದು, ಹಣವಿರುವ ಜನರು ಬಡವರ ಜೀವ ಮತ್ತು ಅವರ ಅಂಗಾಂಗಗಳನ್ನು ಪಡೆಯುವುದರ ಮೂಲಕ ಸಾವಿರಾರು ವರ್ಷಗಳಿಂದಲೂ ಶೋಷಿಸಿ

ಈ ದೇಶವನ್ನು ಬಡತನ, ಅನಕ್ಷರತೆ ಮತ್ತು ಅಜ್ಞಾನದ ಕೂಪಕ್ಕೆ ತಳ್ಳಿರುವವರು ಹೆಚ್ಚಾಗಿ ಶ್ರೀಮಂತರುಗಳೇ. ಈ ರೀತಿಯಲ್ಲಿ ಅಂಗಾಂಗಗಳನ್ನು ಖರೀದಿಸತಕ್ಕಂಥ ಸಾಮರ್ಥ್ಯ ಹೊಂದಿದ್ದಾರಲ್ಲದೆ, ಇವರುಗಳ ಅಂಗಾಂಗಗಳನ್ನು ಪಡೆದು ಬದುಕುವುದಕ್ಕೂ ಪ್ರಯತ್ನ ಮಾಡುತ್ತಿರುವ ದಿಸೆಯಲ್ಲಿ ಇವ್ಹೊತ್ತು ಅಂಗಾಂಗಳನ್ನು ಅನೈತಿಕವಾಗಿ ಮಾಡುತ್ತಿರುವುದು ಸರಿಯಲ್ಲವೆಂದು ತಿಳಿದು 1994ನೇ ಇಸವಿಯಲ್ಲಿ ಈ ಕುರಿತಂತೆ ಕೇಂದ್ರ ಸರ್ಕಾರ ಒಂದು ಕಾಯ್ದೆಯನ್ನು ಜಾರಿ ಮಾಡಿತು. ಅಲ್ಲಿ ನಡೆಯುತ್ತಿರುವ ದಾಂಧಲೆಯಲ್ಲಿ ಡಾ॥ ಸಿದ್ಧರಾಜು ಕೂಡ ಒಬ್ಬರು ಎನ್ನುವುದನ್ನು ಅಲ್ಲಿ ನಮೂದಿಸಲ್ಪಟ್ಟಿದೆ, ಮಾನ್ಯ ಸದಸ್ಯರು ಹೇಳಿದಂತೆ ಅನೇಕ ಕೇಸುಗಳಲ್ಲಿ ಮಾಡಿದ್ದಾರೆ. ಆದರೆ, ಸಿದ್ಧರಾಜು ಸರ್ಜನ್ ಅಲ್ಲ. ರಿಲೇಟಿವ್ ಕಿಡ್ನಿಯನ್ನು ಕೊಡಬೇಕೇ ಇಲ್ಲವೇ ಎಂಬ ಬಗ್ಗೆ ಹೇಳುವುದಕ್ಕಷ್ಟೇ ಅವರು ಇರುವುದು. ಕಾನೂನು ತಜ್ಞರನ್ನು ಏಕೆ ಆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದೆವು ಎಂದರೆ un-ethical way of conducting transplanting of human organs ಅದನ್ನು ತಡೆಗಟ್ಟುವುದಕ್ಕೋಸ್ಕರ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದೆವು. ಇವರು ನೆಫ್ರಾಲಜಿಸ್ಟ್ ಆಗಿದ್ದು ನಮ್ಮ ರಾಜ್ಯದಲ್ಲಿದ್ದು, ಪ್ರಸ್ತುತ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅವರೇ ಡಯಾಲಿಸಿಸ್ ಮಾಡುತ್ತಿರುವುದು. ಸರ್ಕಾರದಲ್ಲಿ ಕಾನೂನು ಕಾರ್ಯದರ್ಶಿಗಳ ಕೆಳಗೆ ಇಂತಹುದು ನಡೆಯುತ್ತಿದೆಯೆಂದರೆ ತಕ್ಷಣ ಅವರನ್ನು ಬದಲಾಯಿಸಿ ಯುರಾಲಜಿ ತಜ್ಞರನ್ನೇ ಸದಸ್ಯರನ್ನಾಗಿ ಮಾಡಲು ಸರ್ಕಾರದ ಅಭ್ಯಂತರವೇನೂ ಇಲ್ಲ. ಮತ್ತು ಅವರ ಮೇಲಿನ ಕೇಸುಗಳ ಬಗ್ಗೆ ಸರ್ಕಾರ ಕಾನೂನು ರೀತ್ಯ ಕ್ರಮ ಕೈಗೊಳ್ಳುತ್ತದೆ.

ಶ್ರೀ ಎಸ್.ಸುರೇಶ್‌ಕುಮಾರ್: ಇದರ ಬಗ್ಗೆ ಚರ್ಚೆಗೆ ಅವಕಾಶವಿಲ್ಲವೆಂದರೆ ನಾನು ಒಪ್ಪಿಕೊಳ್ಳುತ್ತೇನೆ. ಗೊತ್ತಿದ್ದೂ ಗೊತ್ತಿದ್ದೂ ಇಡೀ ದೇಶಕ್ಕೆ ಏಕೆ ಮಾಡಿದರು?

ಡಾ॥ ಹೆಚ್.ಸಿ.ಮಹದೇವಪ್ಪ: ಪ್ರೊಫೆಸರ್ ಅಂಡ್ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಅವರನ್ನು ಮಾಡಬೇಕೆಂದು ಬಂದಾಗ ಸಿದ್ಧರಾಜು ಅವರೇ ಇದ್ದುದು. ಆ ಕಾರಣಕ್ಕಾಗಿಯೇ ಅವರನ್ನು ಮಾಡಿದೆವು. ಇದರಲ್ಲಿ ದುರುದ್ದೇಶವಾಗಲೀ, ಅವರಿಗೆ ಎನ್‌ಕರೇಜ್ ಕೊಡಬೇಕೆಂದಾಗಲೀ ಬೇರೇನೂ ಇಲ್ಲ. ಅವರಿಗೆ ಬೆಂಬಲ ಕೊಡಬೇಕು ಅಥವಾ ಅನ್‌ಎಥಿಕಲ್ ವೇ ಆಗಿ ಮಾಡಿ ಸರ್ಕಾರವೇ ಇವರಿಗೆ ಕೊಡಬೇಕೆಂದು ಹೇಳಿ ಮಾಡತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಲು ಸಾಧ್ಯವಿಲ್ಲ, ಅದನ್ನು ಮಾಡುವುದಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಸರ್ಕಾರ ಮಾಡಿದೆಯೆಲ್ಲಾ.

ಶ್ರೀ ಕೆ.ಎಸ್.ಈಶ್ವರಪ್ಪ: ಅವರು ರಾಬರಿ ಮಾಡುವವರೆಂದು, ಕೊಲೆಗಡುಕರೆಂದು ಚಾರ್ಜ್‌ಶೀಟ್ ಇದೆ. ಆ ವ್ಯಕ್ತಿ ಮೇಲೆ ಸುಮಾರು 1080 ಪುಟಗಳ ಕೇಸಿನ ಜಡ್ಜ್‌ಮೆಂಟ್ ಇದೆ, ಚಾರ್ಜ್‌ಶೀಟ್ ಇದೆ. ಕೊಲೆಗಡುಕ, ರಾಬರಿ ಮಾಡುತ್ತಿರುವವರು

ಇಡೀ ಪ್ರಪಂಚಕ್ಕೆ ಇಲ್ಲಿಂದಲೇ ಕಳುಹಿಸುತ್ತಿರುವುದು ಗೊತ್ತಿದ್ದೂ ಕೂಡ ಅಂತಹ ಕ್ರಿಮಿನಲ್‌ನನ್ನು ಕರೆದುಕೊಂಡು ಬಂದು ಇಂತಹ ಕಮಿಟಿಗೆ ಹಾಕುವುದಾದರೆ ಸರ್ಕಾರಕ್ಕೆ ಕಣ್ಣು ಇಲ್ಲವೇ? ಇಷ್ಟೊಂದು ಕಳ್ಳತನ ಆಗುತ್ತಿರಬೇಕಾಗದರೆ....

Dr. H.C.MAHADEVAPPA: Only to give suggestion as to whether surgery could be conducted or not, whether it is related or not related.

(Interruptions)

ಆ ಕಾರಣಕ್ಕಷ್ಟೇ ಅವರನ್ನು ಹಾಕಿದ್ದು, ಇದರ ಬಗ್ಗೆ ಕಡ್ಡಾಯವಾಗಿಯೇನೂ ಸರ್ಕಾರದಲ್ಲಿಲ್ಲ.

ಶ್ರೀ ಜಿ.ಎಸ್.ಶಿವನಂಜಪ್ಪ (ಗುಬ್ಬಿ): ಮಾನ್ಯ ಅಧ್ಯಕ್ಷರೆ, ಇಲ್ಲಿಂದ ರಾಂಗ್ ಮೆಸೇಜ್ ಹೋಗುತ್ತಿದೆ, ಹಾಗೆ ಹೋಗಬಾರದು. ಕಿಡ್ನಿಯನ್ನು ಒಬ್ಬ ಮನುಷ್ಯನಿಂದ ತೆಗೆದು ಮತ್ತೊಬ್ಬ ಮನುಷ್ಯನಿಗೆ ತಕ್ಷಣ ಹಾಕಬಹುದೇ ಹೊರತು ಅದನ್ನು ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ, ಟ್ರಾನ್ಸ್‌ಪ್ಲಾಂಟ್ ಮಾಡಬಹುದು. ಸಿದ್ಧರಾಜುರವರು ನೆಫ್ರಾಲಜಿಸ್ಟ್ ಆಗಿದ್ದಾರೆಯೇ ವಿನಾ ಸರ್ಜನ್ ಅಲ್ಲ. ಅವರೇನೂ ನನಗೆ ಕೊಡಿರೆಂದು ಕೇಳಿಕೊಂಡಿಲ್ಲ, ಸುಮ್ಮನೆ ರಾಂಗ್ ಮೆಸೇಜ್ ಏಕೆ ಕಳುಹಿಸುತ್ತಿದ್ದೀರಿ?

SRI S.SURESH KUMAR: He is facing charges.

(Interruptions)

ಶ್ರೀ ಜಿ.ಎಸ್.ಶಿವನಂಜಪ್ಪ: ಕಿಡ್ನಿಗಳನ್ನು ಇಲ್ಲಿಂದ ತೆಗೆದಕೊಂಡು ಅರಬ್ ದೇಶಗಳಿಗೆ ರವಾನಿಸಲಾಗುತ್ತಿದೆಯೆಂಬ ಸುದ್ದಿ ಪತ್ರಿಕೆಗಳಲ್ಲಿ ವರದಿಯಾಯಿತು. ಸುಮ್ಮನೆ ರಾಂಗ್ ಮೆಸೇಜ್ ಅನ್ನು ಏಕೆ ಕಳುಹಿಸುತ್ತಿದ್ದೀರಿ? ಒಬ್ಬ ಮನುಷ್ಯನನ್ನು ಏನಾದರೂ ಮಾಡಿ ಕೆಳಕ್ಕೆ ತುಳಿಯಬೇಕೆಂದರೆ ಈ ತರಹ ಎಲ್ಲಾ ನಡೆಯುತ್ತದೆ, ಇದು ಆಗಬಾರದು.

MR. SPEAKER: You have mentioned with documents. ಯಾರನ್ನು ಮೆಂಬರ್ ಆಗಿ ಮಾಡಿದ್ದಾರೋ ಅವರ ಮೇಲೆ ಕೆಲವು ಚಾರ್ಜಸ್ ಇದೆ. ಅನ್‌ಎಥಿಕಲ್ ಪ್ರಾಕ್ಟಿಸಸ್ ಅನ್ನು ಪ್ರಿವೆಂಟ್ ಮಾಡತಕ್ಕಂಥ ಕಮಿಟಿಯಲ್ಲಿ ಅವರು ಇರುವುದು ಉಚಿತವೇ ಎಂದು ನೀವು ಕೇಳಿದ್ದೀರಿ. The Government has conceded. ಅದು ಆಗಿರುವುದು ತಪ್ಪು. ಏನಾಗುತ್ತದೆಂದರೆ, ಕಮಿಟಿಯನ್ನು ರಚಿಸಿದಾಗ ಪ್ರೊಫೆಸರ್ ಅಂಡ್ ಹೆಡ್ ಆಫ್ ದಿ

ಡಿಪಾರ್ಟ್‌ಮೆಂಟ್, ನೆಫ್ರಾಲಜಿ ಎಂದು ಮಾಡಿರುತ್ತಾರೆ. ಆಗ ಇವರು ಪೊಜಿಷನ್‌ನಲ್ಲಿದ್ದು ಹಾಗಾಗಿ ಬಂದಿರುತ್ತಾರೆ. They said they are prepared to make a change. ಅದನ್ನು ಮುಂದಕ್ಕೆ ಬೆಳೆಸಿಕೊಂಡು ಹೋಗುವುದು ಬೇಡ.

ಶ್ರೀ ಎಸ್.ಸುರೇಶ್‌ಕುಮಾರ್: ಅಕಸ್ಮಾತ್ ನಮ್ಮ ಸರ್ಕಾರದಲ್ಲಿ ಏನಾದರೂ ಸ್ವಲ್ಪ ಬದಲಾವಣೆಯಾದರೆ ವೀರಪ್ಪನ್‌ನನ್ನು ಕರೆದುಕೊಂಡು ಬಂದು ಅರಣ್ಯ ಸಚಿವರನ್ನಾಗಿ ಮಾಡುತ್ತೇವೆಯೇ? ..... ಹೌದು, ಬೇರೆ ಇನ್ನೇನಿದೆ?

ಶ್ರೀ ಕೆ.ಎಸ್.ಈಶ್ವರಪ್ಪ: ಇಡೀ ದೇಶಾದ್ಯಂತ, ಪ್ರಪಂಚಾದ್ಯಂತ ಈ ರೀತಿ ಕಿಡ್ನಿಯನ್ನು ಮಾರಾಟ ಮಾಡುತ್ತಿದ್ದಾರೆಂದು ತೀರ್ಮಾನವಾಗಿರುವ ವ್ಯಕ್ತಿಯನ್ನು ಕರೆದುಕೊಂಡು ಬಂದು ಈ ಸಮಿತಿಯಲ್ಲಿ ಹಾಕುವುದು ನ್ಯಾಯವೇ? ಇದಕ್ಕೆ ನಿಮ್ಮೆಲ್ಲರ ಒಪ್ಪಿಗೆಯಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಆತ ಯಾವ ಕಿಡ್ನಿಯನ್ನೂ ಮುಟ್ಟಿಲ್ಲ, ಆತ ಬರೀ ಡಾಕ್ಟರ್ ಎಂದು ನೀವು ಸರ್ಟಿಫಿಕೇಟ್ ಕೊಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ, ನೀವು ಹಾಗೆಯೇ ಮುಂದುವರೆಸಿ. ಇನ್ನು ಎಷ್ಟು ಕಿಡ್ನಿಗಳನ್ನು ಕಳ್ಳತನ ಮಾಡಿದರೂ ಅಂತಹ ವ್ಯಕ್ತಿಗಳನ್ನೇ ಸೇರಿಸಿಕೊಳ್ಳಿ, ನಾವು ಬೇಡವೆಂದು ಹೇಳುವುದಿಲ್ಲ.

ಅಧ್ಯಕ್ಷರು: ಈಶ್ವರಪ್ಪನವರೇ, ನಾನು ಏನು ಹೇಳುತ್ತೇನೆಂದರೆ, ಆವೇಶಕ್ಕೊಳಗಾಗಿ ನಾವು ವಿಷಯವನ್ನು ಬೇರೆಡೆಗೆ ತಿರುಚುವುದು ಬೇಡ. ಕಿಡ್ನಿ ಪ್ಲಾಂಟೇಶನ್ ವ್ಯವಹಾರದಲ್ಲಿ ಸಾವು ಸಂಭವಿಸಿದೆ, ಕೆಲವು ಅನ್‌ಎಥಿಕಲ್ ಪ್ರಾಕ್ಟಿಸಸ್ ನಡೆದಿದೆಯೆಂದು ಚಾರ್ಜ್‌ಶೀಟ್ ಹಾಕುವಾಗ ಆ ಡಾಕ್ಟರ್ ಅವರನ್ನು ಇನ್ವಿಡೆಂಟಲಿ 302ಕ್ಕೋ, ಮತ್ತೊಂದಕ್ಕೋ ಸೇರಿಸಿರುತ್ತಾರೆ. Not that, that doctor is robberer or a murderer. Due to unethical practices, it is resulted ultimately in death and therefore he is also impleaded in a murder case. I am not trying to hold any brief for the Doctor. ಇವರು ಕಮಿಟಿಯನ್ನು ರಚಿಸುವಾಗ ಪ್ರೊಫೆಸರ್ ಅಂಡ್ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆಫ್ ನೆಫ್ರಾಲಜಿ ಎಂದು ಹೇಳಿದ್ದರಿಂದ that must have been nominated. Since you have brought it to the notice of the House, the Government in all fairness has conceded, ನಾವು ಅದನ್ನು ಬದಲಾವಣೆ ಮಾಡಿ ಯುರಾಲಜಿಸ್ಟ್ ಅವರನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. Let us stop here.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುವ ವಿಚಾರವೇನೆಂದರೆ, ಶೂನ್ಯ ವೇಳೆಗೆ ಸದನದ ನಿಯಮಾವಳಿಯಲ್ಲಿ ಅವಕಾಶವಿಲ್ಲ. ತಮ್ಮ ಔದಾರ್ಯದಿಂದಾಗಿ ಕನ್‌ವೆನ್‌ಷನ್ ಆಗಿ

ಇದಕ್ಕೆ ತಾವು ಅವಕಾಶ ಮಾಡಿಕೊಡುತ್ತಿದ್ದೀರಿ. ಸರ್ಕಾರ ಕೂಡ ಅನೇಕ ಸಂದರ್ಭಗಳಲ್ಲಿ ಸ್ಪಂದಿಸಿ ತಕ್ಷಣ ಉತ್ತರ ಕೊಡುವುದಕ್ಕೆ ಪ್ರಯತ್ನಿಸುತ್ತಿದೆ. ಇದರಲ್ಲಿ ರೆಗ್ಯುಲರ್ ಡಿಬೇಟ್ ಆಗಬಾರದು. ಇದೇ ಪದ್ಧತಿಯನ್ನು ನಾವು ಪಾಲಿಸಿಕೊಂಡು ಬಂದಿದ್ದೇವೆ. ಆದರೆ, ಇವೊತ್ತು ಇಷ್ಟೊಂದು ದೀರ್ಘವಾಗಿ ಚರ್ಚೆ ನಡೆದಂಥ ರೀತಿ ನೋಡಿದರೆ it is more than a regular debate ಏನೇನೋ, ಯಾವ್ಯಾವುದೋ ಸಂಬಂಧವಿಲ್ಲದಿರುವುದನ್ನೆಲ್ಲಾ ಹೇಳಿದರೆ ಅದಕ್ಕೆ ನಾವು ಇನ್ನೊಂದು ಉತ್ತರ ಕೊಡಬೇಕಾಗುತ್ತದೆ. ಆದುದರಿಂದ, ದಯವಿಟ್ಟು ತಾವು ಇಂಥಾದ್ದಕ್ಕೆಲ್ಲಾ ಅವಕಾಶ ಕೊಡಬಾರದು.

ಅಧ್ಯಕ್ಷರು: ಅವೆಲ್ಲವೂ ಪರಸ್ಪರ ತಾವು ಹೇಳಿಕೊಳ್ಳುವುದಕ್ಕೆ, ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. Unless it is unparliamentary, you are at liberty to exchange.

ಶ್ರೀ ಸಿ.ಬೈರೇಗೌಡ: ಆದರೂ ತಾವು ಇದಕ್ಕೆ ಕಡಿವಾಣ ಹಾಕಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು): ಈ ವಿಚಾರದಲ್ಲಿ ತಾವು ಏನು ಹೇಳಿದ್ದೀರಿ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಹೇಳಿಕೆ ಮೇಲೆ ಹೇಳತಕ್ಕಂಥ ವಿಷಯ ಏನೂ ಇಲ್ಲ. ನಾನು ಆ ಸಂದರ್ಭದಲ್ಲಿ ಗೃಹ ಇಲಾಖೆ ಮಂತ್ರಿಯಾಗಿದ್ದಾಗ ಈ ಅವ್ಯವಹಾರದ ಪ್ರಕರಣ ನಡೆದಿದೆಯೆಂದು ಆಪಾದನೆ ಮಾಡಿದ್ದಾರೆ. ನಿಜ, ತಾವು ಅದನ್ನು ಬಹಳ ಅಪ್ರೊಪ್ರಿಯೇಟ್ ಆಗಿ ಹೇಳಿದ್ದೀರಿ. ಪ್ರೊ: ಸಿದ್ಧರಾಜುರವರ ಮೇಲೆ ಇರುವುದೇನೆಂದರೆ, ಕಿಡ್ನಿ ತೆಗೆದುಕೊಳ್ಳತಕ್ಕಂಥವರು ಮತ್ತು ಕಿಡ್ನಿ ಕೊಡತಕ್ಕಂಥ ಮಧ್ಯಸ್ಥರು ಯಾರಿದ್ದರು ಅವರು ದುಡ್ಡು ಮಾಡುತ್ತಿದ್ದರೆಂಬುದರ ಬಗ್ಗೆ ತನಿಖೆಯಾಗಿದೆ. ಆದರಲ್ಲೂ ಸಹ ಸಿದ್ಧರಾಜು ಅವರದು ಇನ್‌ಡೈರೆಕ್ಟ್ ಆಗಿ ಅನ್‌ಎಥಿಕಲ್ ಪ್ರಾಕ್ಟೀಸ್ ಇರಬಹುದೆಂಬ ವಿಚಾರ ಬಿಟ್ಟರೆ about his competence, nobody has questioned, he is one of the most well known Nephrologist. ಏಕೆಂದರೆ, ಅವರು ಸದನಕ್ಕೆ ಬಂದು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಆ ಸಂದರ್ಭದಲ್ಲಿ ಎಂಟ್ರೈರ್ ಚಾರ್ಜ್‌ಶೀಟ್ ಹಾಕಿಸಿದ್ದು, ಅದನ್ನು ಮಾಡಿಸುವುದಕ್ಕೆ ಕಾರಣಕರ್ತರಾದ ಎಲ್ಲರೂ ಸಹ, ಡಿ.ಜಿ.ಪಿ. ಆಗಿರುವ ಶ್ರೀನಿವಾಸುಲು ಮತ್ತು ನಾನು ಆಗ ಗೃಹಮಂತ್ರಿಯಾಗಿದ್ದಾಗ ಸದರಿ ಪ್ರಕರಣ ಪತ್ತೆಯಾಗಿದ್ದು. ಅವರು ಈಗ ಸದನಕ್ಕೆ ಬಂದು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ರೆಕಾರ್ಡ್ ಸರಿಯಾಗಿ ಇರಬೇಕೆನ್ನುವ ದೃಷ್ಟಿಯಿಂದ ತಾವು ಏನು ಹೇಳಿದ್ದೀರಿ, ಅದು ಅನ್‌ಎಥಿಕಲ್ ಪ್ರಾಕ್ಟಿಸಸ್ ಎನ್ನುವ ದೃಷ್ಟಿಯಿಂದ ಹೊರತುಪಡಿಸಿದರೆ about his competence ತಮಗೂ ಗೊತ್ತಿದೆ.

ಯುರಾಲಜಿ ಮತ್ತು ನೆಫ್ರಾಲಜಿಗೆ ಸಂಬಂಧಿಸಿದಂತೆ ಪ್ರೊಫೆಸರ್ಸ್, ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಡಾಕ್ಟರ್‌ಗಳು ಆ ಸೂಪರ್ ಸ್ಪೆಷಲೈಜೇಷನ್‌ನಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ ರಾಂಗ್ ಸಿಗ್ನಲ್ ಕೊಡಬಾರದೆನ್ನುವ ದೃಷ್ಟಿಯಿಂದ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ರಾಂಗ್ ಸಿಗ್ನಲ್ ನಾವು ಕೊಟ್ಟಿದ್ದೇ ಅಥವಾ ಕಮಿಟಿ ಫಾರ್ಮೇಶನ್ ಮಾಡಿರುವವರು ಕೊಟ್ಟದ್ದೇ? ಅದನ್ನು ಮಾಡದೇ ಇದ್ದಿದ್ದರೆ ನಾನು ಇಲ್ಲಿ ವಿಷಯವನ್ನು ಪ್ರಸ್ತಾಪಿಸುತ್ತಿರಲಿಲ್ಲ.

ಡಾ॥ ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಸಿಂಧ್ಯಾರವರು ಕೂಡ ಇದರ ಬಗ್ಗೆ ಹೇಳಿದ್ದಾರೆ. ಸಿದ್ದರಾಜು ಅವರು ಆ ಒಂದು ಅಂಗಾಂಗದ ಹೋಲಿಕೆ ಮಾಡುವಾಗ compatability or incompatibility, related or non-related ಅಷ್ಟಕ್ಕೇ ಸೀಮಿತ He is an expert. ಜೊತೆಗೆ ನಾವೆಲ್ಲರೂ ಮಾತನಾಡುತ್ತೇವೆ. ಏನೆಂದರೆ, ಬಡವರಿಂದಲೇ ಏಕೆ ಕಿಡ್ನಿ ತೆಗೆದಕೊಳ್ಳಬೇಕು? ಶ್ರೀಮಂತರು ಏಕೆ ಕೊಡುವುದಿಲ್ಲ? ಲವ್ ಅಂಡ್ ಅಫೆಕ್ಷನ್ ಅನ್ನು ಎಸ್ಟಾಬ್ಲಿಶ್‌ಮೆಂಟ್ ಮಾಡಿ ಕಡವರಿಕ್ ಕೊಡಬೇಕೆಂದು ಮಾಡಿದರು. ತಾವೆಲ್ಲರೂ ಅನುಮತಿ ಕೊಟ್ಟರೆ ನಾನು ಈ ಸಮಿತಿಯನ್ನೇ ರದ್ದು ಮಾಡುತ್ತೇನೆ. ಕ್ಯಾನ್ಸರ್ ಬಂದರೆ ಜನರು ಸಾಯುವುದಿಲ್ಲವೇ? ಆ್ಯಕ್ಸಿಡೆಂಟ್ ಆದಾಗ ಜನರು ಸಾಯುವುದಿಲ್ಲವೇ? ಬಡವರು ತಮ್ಮ ಕಿಡ್ನಿ ಕೊಟ್ಟು ಏಕೆ ಅವರು ಸಾಯಬೇಕು?

MR. SPEAKER: Each one of you seem to be experienced in drawing adverse inference.

ಶ್ರೀ ಕೆ.ಎಸ್.ಈಶ್ವರಪ್ಪ: ನೀವು ಯಾರನ್ನು ಬೇಕಾದರೂ ಹಾಕಿಕೊಳ್ಳಿ, ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ.

12.30 ಪಿ.ಎಂ

ಔ) ಪಿ.ಯು.ಸಿ. ಮೌಲ್ಯಮಾಪನವನ್ನು ಶಿಕ್ಷಕರು ಬಹಿಷ್ಕರಿಸುವ ಬಗ್ಗೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ತಿಂಗಳ 28ರಂದು ಪ್ರಾರಂಭವಾಗಬೇಕಿರುವ ಪಿ.ಯು.ಸಿ ಪತ್ರಿಕೆಗಳ ಮೌಲ್ಯಮಾಪನವನ್ನು ಬಾಯ್‌ಕಾಟ್ ಮಾಡಬೇಕೆಂದು ಶಿಕ್ಷಕರು ನಿರ್ಣಯವನ್ನು ತೆಗೆದುಕೊಂಡಿರುವುದು ಪತ್ರಿಕೆಗಳಲ್ಲಿ ಬಂದಿದೆ. ಈ ರೀತಿ ಶಿಕ್ಷಕರು ಮೌಲ್ಯಮಾಪನವನ್ನು ಬಾಯ್‌ಕಾಟ್ ಮಾಡುವುದರಿಂದ ಮುಂದೆ ಬರಲಿರುವ ಸಿ.ಇ.ಟಿ. ಪರೀಕ್ಷೆಯಾಗಲಿ, ಕೇಂದ್ರ ಸರ್ಕಾರದಿಂದ ನಡೆಸುವಂಥ ಯಾವುದೇ